Notice of Adjournment Motion *re*: Atrocities Committed by some Goondas at the Exhibition, Davangere

ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಸ್ವಾಮಿ, ಅಧ್ಯಕ್ಷರೇ, ನಿನ್ನೆ ರಾತ್ರಿ ದಾವಣಗೆರೆ ವಸ್ತು ಪ್ರದರ್ಶನದಲ್ಲಿ ಗೂಂಡಾಗಳು ನಡೆಸಿರತಕ್ಕ ಆಕೃತ್ಯ ಇಲ್ಲಿಗೇ ಮುಗಿಯಿತು ಎಂದು ತಾವು ತಿಳಿಯಬೇಕಾಗಿಲ್ಲ. ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ದಾವಣಗೆರೆಯಲ್ಲಿರುವ ಕಾಂಗ್ರೆಸ್ ಜನ ಒಂದು ಜೇಬಿನಲ್ಲಿ ಸರ್ಕಾರ, ಇನ್ನೊಂದು ಜೇಬಿನಲ್ಲಿ ಕಾಂಗ್ರೆಸ್ ಸಂಸ್ಥೆ, ಎರಡೂ ತಮಗೆ ಗುತ್ತಿಗೆಗೆ ದೊರೆತಿದೆ ಎನ್ನುವ ಮನೋಭಾವನೆಯಿಂದ ವರ್ತನೆ ಮಾಡುತ್ತಿದ್ದಾರೆ. ಅವರು ಯಾವ ಕೋಪಾತಕ ಕೆಲಸಗಳನ್ನೂ ಮಾಡುವುದಕ್ಕೆ ಹೇಸುವುದಿಲ್ಲ. ವಸ್ತು ಪ್ರದರ್ಶನ ನಡೆಯದಂತೆ ಅಧಿಕಾರವರ್ಗದಿಂದ ಹಿಡಿದು ಸರ್ಕಾರದವರೆಗೆ ಎಲ್ಲ ಮೂಲಗಳಿಂದಲೂ ಅಡ್ಡಿ ಆತಂಕಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದರು. ಅದು ಸಾಧ್ಯವಾಗದೆ ಹೋಯಿತು. ಇತ್ತೀಚೆಗೆ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಅವರು ಸೋಲನ್ನು ಅನುಭವಿಸಿದ್ದಾರೆ. ಅವರು ಸೋಲನ್ನು ಅನುಭವಿಸುವುದೇ ಆಗಿದೆ. ಚುನಾವಣೆಗಳಲ್ಲಿ ಮೊದಲನೆಯ ಸೋಲನ್ನು ಅನುಭವಿಸಿದರು, ಎರಡನೆ ಸೋಲನ್ನು ವಸ್ತು ಪ್ರದರ್ಶನದ ಸಂಬಂಧದಲ್ಲಿ ಅನುಭವಿಸಿದರು. ನಿನ್ನೆಯ ದಿವಸ ನಡೆದಿರತಕ್ಕ ಘಟನೆ ಏನಿದೆ ಇದು ಇಲ್ಲಿಗೇ ಮುಗಿಯಿತು ಎನ್ನುವ ಹಾಗಿಲ್ಲ. ಸ್ವಪ್ರತಿಷ್ಠೆ ಮತ್ತು ಸ್ವಸಾಮರ್ಥ್ಯ ಎಲ್ಲದ ಕಾಂಗ್ರೆಸ್‌ನವರು ಗೂಂಡಾಗಳ ಸಹಾಯದಿಂದ ಕೆಲಸ ಮಾಡುತ್ತಿದ್ದಾರೆ. ಅದುದರಿಂದ ಇದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ರಕ್ತಪಾತವಾದೀತು, ಗೂಂಡಾಗಳ ರಾಜ್ಯವಾದೀತು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ಸಭೆಗೆ ತಿಳಿಸಬೇಕು.

Sri S. M. GUREDDY (Muddebihal).—On a point of order Sir. Rule 312 of the Rules of Procedure says :

> "A Member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

The Chair was pleased to say that consent has not been given. The Hon. Member Sri Banakar is therefore not in order to speak anything he likes. I want to ask the Chair whether permission is given to him to raise this point.

Mr. SPEAKER.—Mr. Vatal Nagaraj has given notice and I have informed him and the other hon. Members here.....

†Sri VEERENDRA PATIL (Chief Minister).—I want to say one thing about this. ಈ ಸಭೆಗೆ ಕಾನೂನು ಕಾಯ್ದೆ ಇದ್ದಂತೆ ಕಾಣಿಸುವುದಿಲ್ಲ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಯಾರಾದರೂ ಮಾನ್ಯ ಸದಸ್ಯರು ಸರ್ಕಾರದಿಂದ ಇನ್‌ಫರ್‌ಮೇಷನ್ ಪಡೆಯಬೇಕು ಎಂದು ಕೇಳಿದಾಗ ಅದನ್ನು ನಾವು ಕೊಡುವುದಕ್ಕೆ ಸದಾ ಸಿದ್ಧರಿದ್ದೇವೆ. ಆದರೆ ಅದಕ್ಕೆ ಒಂದು ಪ್ರೊಸೀಜರ್ ರೂಲ್ಸ್ ಪ್ರಕಾರ ಇದೆ. ರೂಲ್ಸ್ ಪ್ರಕಾರ ಯಾವ ಪ್ರೊಸೀಜರ್ ಇದೆಯೋ ಅದನ್ನು ತಾವು ಎನ್‌ಫೋರ್ಸ್ ಮಾಡಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಯಾವುದೇ ಸಮಾಚಾರ ಮಾನ್ಯ ಸದಸ್ಯರಿಗೆ ಬೇಕಾಗಿದ್ದರೆ ಈವೊತ್ತು ನೋಟೀಸ್ ಕೊಟ್ಟರೆ ಬಹುಶಃ ನಾಳೆ ಅಥವಾ 24 ಗಂಟೆಯಲ್ಲಿ ಅದನ್ನು ಒದಗಿಸಬಹುದು. ಒಂದು ವೇಳೆ ಒದಗಿಸುವುದಕ್ಕೆ ಆಗಲಾರದೆ ಹೋದರೆ ಈ ಕಾರಣಗಳಿಂದ ಸಮಾಚಾರ ಈವೊತ್ತು ಕೊಡುವುದಕ್ಕೆ ಆಗಲಲ್ಲ, ಮತ್ತೊಮ್ಮೆ ಕೊಡುತ್ತೇವೆಂದು ಹೇಳುತ್ತೇವೆ. ಅದರ ಅರ್ಥ, ನಾನು ಅರ್ಥ ಮಾಡಿಕೊಳ್ಳುವುದು ಏನೆಂದರೆ, ಮಾನ್ಯ ಸದಸ್ಯರು ಈ ಸಭೆಯ ಮುಖಾಂತರ, ಒಳಗೆ ಅಥವಾ ಹೊರಗೆ, ತಮ್ಮ ಛೇಂಬರಿನಲ್ಲಿ ಇಂಥ ಇನ್‌ಫರ್ಮೇಷನ್ ಬೇಕು ಎಂದು ನಿಮಗೆ ಕೇಳಿದರೆ ಅದನ್ನು

(SRI VEERENDRA PATIL)

ಒದಗಿಸುವುದಕ್ಕೆ ನಾವು ತಯಾರಿದ್ದೇವೆ. ಆದರೆ ಇಲ್ಲಿ ಏನು ಆಗುತ್ತಿದೆ ಎಂದರೆ, ಶ್ರೀಮಾನ್ ಪಾಟೀಳ್ ನಾಗರಾಜ್ ಅವರು ಕಳಿಸಿದಂಥ ಕಾರ್ ಅಟೆನ್‌ಷನ್ ನೋಟೀಸ್ ಪ್ರತಿ ನನಗೆ ಈಗ ಬಂದಿದೆ. ದಾವಣಗೆರೆಯಲ್ಲಿ ನಡೆಯುತ್ತಿರುವ ವ್ಯವಸಾಯ ವಸ್ತು ಪ್ರದರ್ಶನದಲ್ಲಿ ಗಲಭೆ ಎಂದು ಕೇಳಿದ್ದಾರೆ. ಯಾರು ಮಾಡಿದ್ದಾರೆ, ಏನು ಎಂಬುದು ಅದರಲ್ಲಿಲ್ಲ. ಅದರ ಸಲುವಾಗಿ ಏನಾಯಿತು ಎಂದರೆ ತಮ್ಮ ಹತ್ತಿರ ಬಂದು ನೋಟೀಸ್ ಕೊಟ್ಟು, ಕೂಡಲೇ ಸಭೆಯಲ್ಲಿ ಬಂದು ಸರ್ಕಾರ ಸ್ಟೇಟ್‌ಮೆಂಟ್ ಮಾಡಬೇಕು ಎಂದರೆ ಹೇಗೆ ಸಾಧ್ಯ? ಮಾನ್ಯ ಸದಸ್ಯರು ಸ್ಟೇಟ್‌ಮೆಂಟ್ ಏಕೆ ಕೇಳುತ್ತಾರೆಂದರೆ ನಡೆದಿರುವ ವಿಷಯಗಳನ್ನು ತಿಳಿಯಬೇಕು ಎಂದು ಕೇಳುತ್ತಾರೆ. ಅವರಿಗೇ ತಿಳಿದಿದ್ದರೆ ಕೇಳಬೇಕಾದ ಅವಶ್ಯಕತೆ ಇಲ್ಲ. ತಮ್ಮ ಹತ್ತಿರ ಕಾರ್ ಅಟೆನ್‌ಷನ್ ಮೋಷನ್ ಕೊಟ್ಟಿದ್ದಾರೆ. ಸಭೆಯಲ್ಲಿ ಎದ್ದು ದಾವಣಗೆರೆಯಲ್ಲಿ ಕಾಂಗ್ರೆಸ್ಸಿನವರು ಗೂಂಡಾ ಜನರನ್ನು ಕಟ್ಟಿಕೊಂಡು ರಕ್ತಪಾತ ಮಾಡುತ್ತಾರೆ, ಹಾವಳಿ ಮಾಡುತ್ತಾರೆ ಎಂದು ಹೇಳುತ್ತಿದ್ದಾರೆ. ಇದೆಲ್ಲ ಅವರಿಗೆ ಗೊತ್ತಿದ್ದರೆ ಸ್ಟೇಟ್‌ಮೆಂಟ್ ಮಾಡಬೇಕಾದ ಅವಶ್ಯಕತೆ ಇಲ್ಲ. ಒಂದು ವೇಳೆ ಕಾರ್ ಅಟೆನ್‌ಷನ್ ಮೋಷನ್ ಮತ್ತೆ ಯಾವುದಾದರೂ ಮೋಷನ್ ಮೂಲಕ ಇನ್‌ಫರ್ಮೇಷನ್ ಕೇಳಬೇಕಾಗಿದ್ದರೆ ಇನ್‌ಫರ್ಮೇಷನ್ ಕೊಡುವತನಕ ತಡೆಯಬೇಕು. ಕಾಂಗ್ರೆಸ್‌ನವರು ದಾವಣಗೆರೆಯಲ್ಲಿ ಗಲಭೆ ಮಾಡಿದ್ದಾರೆ, ಗೂಂಡಾ ಜನರನ್ನು ಕರೆದುಕೊಂಡು ಹೋಗಿ ಗಲಭೆ ಮಾಡುತ್ತಾರೆ, ರಕ್ತಪಾತ ಮಾಡುತ್ತಾರೆ ಎಂದೆಲ್ಲ ಮಾನ್ಯ ಸದಸ್ಯರು ಹೇಳುತ್ತಿದ್ದರೆ ನಾನು ಸುಮ್ಮನೆ ಕೂಡಬೇಕೇ? ನಾನು ಮುಖ್ಯಮಂತ್ರಿಯಾಗಿ ಇರಬಹುದು, ಆದರೆ ಕಾಂಗ್ರೆಸ್ ಪ್ರತಿನಿಧಿಯಾಗಿದ್ದೇನೆ. ಕಾಂಗ್ರೆಸ್‌ನವರು ರಕ್ತಪಾತ ಮಾಡಿದ್ದಾರೆ ಎಂದೆಲ್ಲ ಹೇಳುತ್ತಿದ್ದರೆ ಬಾಯಿ ಮುಚ್ಚಿಕೊಂಡು ಕೂಡಲೇ? I am directing—rather I am requesting you.....

(ಅನೇಕ ಸದಸ್ಯರು ಒಟ್ಟಿಗೇ ಎದ್ದುನಿಂತರು)

ಅಧ್ಯಕ್ಷರು.—ಎಲ್ಲಾ ಸದಸ್ಯರೂ ಕೂತುಕೊಳ್ಳಬೇಕು. order, order.

Sri S. SIVAPPA (Sravanabelagola).—The hon. Chief Minister while addressing the Chair, probably in his vehemence or angry mood, said "I am directing the Chair." Is it in consonance with the dignity of the House? He said that probably in his anger. He used the words "I am directing you." Even now it is upto him to correct it. If he corrects. I have no objection.

Mr. SPEAKER.—He has corrected, There is nothing wrong.

Sri VEERENDRA PATIL.—I said I am directing you.....

ಶ್ರೀ ಎಸ್. ಚನ್ನಯ್ಯ.—ಅವರು ಡೈರೆಕ್ಟ್ ಮಾಡುವುದಾಗಿ ಹೇಳಿದರು. ಹೀಗೆ ಹೇಳಬಹುದೇ? ಅಧ್ಯಕ್ಷರು ಎಲ್ಲರನ್ನೂ ಒಂದೇ ಸಮಾನಾಗಿ ನೋಡಬೇಕು.

ಅಧ್ಯಕ್ಷರು.—ಅಂಥಾದ್ದು ಲಕ್ಷದಲ್ಲಿ ಬಂದಿಲ್ಲ. ಅವರು ಡೈರೆಕ್ಟ್ ಎಂದು ಹೇಳಿದ ತಕ್ಷಣ ರಿಕ್ವೆಸ್ಟ್ ಎಂದು ಹೇಳಿ ತಿದ್ದಿಕೊಂಡರು. He corrected himself. Therefore I do not find any bad intention there.

Sri D. B. KALMANKAR (Aland).—The word must be expunged.

Mr. SPEAKER.—I shall consider that position.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮಾತನ್ನು ಮುಗಿಸುತ್ತೇನೆ. ನಿಮ್ಮನ್ನು ರಕ್ಷಣೆ ಕೇಳಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಯಾರಾದರೂ ನನ್ನ ಪಕ್ಷದಮೇರೆ ಟೀಕೆ ಮಾಡುತ್ತಿದ್ದರೆ ಅದನ್ನು ಕೇಳಿಕೊಂಡು ಸುಮ್ಮನಿರಲು ಹೇಗೆ ಸಾಧ್ಯ? ಕಾರ್ ಅಟೆನ್‌ಷನ್ ನೋಟೀಸ್ ಕೊಟ್ಟಾಗ ಸಭೆಯ ಮುಂದೆ ಯಾವುದಾದರೂ ಪ್ರಶ್ನೆ ಬರುತ್ತದೆ, ಎಲ್ಲಕ್ಕಿಂತ ಮುಂಚೆ ಕನ್‌ಕ್ಲೂಷನ್‌ಗೆ ಬರುವುದಕ್ಕೆ ಸಾಧ್ಯವಿಲ್ಲ. ತಮ್ಮನ್ನು ಪ್ರೊಟೆಕ್ಷನ್ ಕೇಳುತ್ತೇನೆ. ನುಮ್ಮನೆ ಮಾನ್ಯ ಸದಸ್ಯರು ನಮ್ಮ ಪಕ್ಷವನ್ನು ಟೀಕೆ ಮಾಡುತ್ತಿದ್ದರೆ ನಾನು ಕೇಳಿಕೊಂಡು ಕೂತರೆ ಜನರ ಅಭಿಪ್ರಾಯ ಯಾವರೀತಿ ಬರಬಹುದು ಎಂಬುದನ್ನು ವಿಚಾರಮಾಡ

ಬೇಕಾಗುವುದು. ದಾವಣಗೆರೆಯಲ್ಲಿ ಕಾಗ್ರೆಸ್ಸಿನವರು ಈ ರೀತಿ ಗೂಂಡಾಗಿರಿ ಮಾಡುತ್ತಿದ್ದಾರೆ ಎಂದು ಏನೇನೋ ಹೇಳಿದರೆ ಹೇಗೆ? ಏನಾಗಿದೆ ಎಂಬುದನ್ನು ನಾಳೆ ಹೇಳುತ್ತೇನೆ. ಈ ಮಾನ್ಯ ಸಭೆಯಲ್ಲಿ ಇಕ್ಷಫರ್ಮೇಷನ್ ಕೇಳುವವರು ಅದನ್ನು ಕೊಡುವ ಪ್ರಯತ್ನ ಮಾಡಬಾರದು. ಈ ರೀತಿ ಇಕ್ಷಫರ್ಮೇಷನ್ ಬಂದಿದೆ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಬೇಕು. ಅವರಿಗೆ ಇಕ್ಷಫರ್ಮೇಷನ್ ಕೊಡಬೇಕಾದವನು ನಾನು. ನಾನು ವಿಚಾರ ತಿಳಿದು ಸ್ಟೇಟ್‌ಮೆಂಟ್ ಮಾಡಬೇಕು. ಆದುದರಿಂದ ನಾನು ನನ್ನ ಪಕ್ಷದಮೇಲೆ ದೋಷಾರೋಪಣೆ ಮಾಡುತ್ತಿದ್ದರೆ ರಕ್ಷಣೆ ಕೊಡಬೇಕೆಂದು ಕಳಕಳಿಯಿಂದ ವಿನಂತಿಯನ್ನು ಅಧ್ಯಕ್ಷರಲ್ಲಿ ಮಾಡಿಕೊಳ್ಳುತ್ತೇನೆ.

(Interruptions)

†Sri K. H. PATIL.—I am on a point of order. I do not want anybody's support. I am at liberty to explain my point of order and I should not be disturbed. There is no rule even for the Speaker to curtail my right.

ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಈ ದಿವಸ ಈ ಸಭೆಯ ನಾಯಕರಾದ ಶ್ರೀ ವೀರೇಂದ್ರ ಪಾಟೀಲರು ಹೇಳುವ ಭರದಲ್ಲಿ ಕದಾಚಿತ್ ನಿಚ್ಚಿನಿಂದ ಮಾತನಾಡುವಾಗ ಹೇಳಿದ್ದು ಘಟನೆಯ ದೃಷ್ಟಿಯಲ್ಲಿ ಸರಿಯಲ್ಲ ಎಂದು ನನಗನ್ನಿಸುತ್ತದೆ. ಅವರು ಇಲ್ಲಿ ಮಾತನಾಡುವಾಗ ತಾವು ಕಾಂಗ್ರೆಸ್ ಪ್ರತಿನಿಧಿಗಳೆಂದು ಭಾವಿಸಿ ಮಾತನಾಡುವುದು ಸರಿಯಲ್ಲ. ಶ್ರೀ ವೀರೇಂದ್ರ ಪಾಟೀಲರು ಈ ಸಭೆಯ ನಾಯಕರು, ಇಲ್ಲಿರುವ ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟಂತೆ ಅವರು ಸಭಾನಾಯಕರು. ಹಾಗಿರುವಾಗ ಅವರು ಆಡಳಿತ ಪಕ್ಷದ ಕಡೆಗೆ ಮಾತ್ರ ಗಮನಕೊಡಬಾರದು. ಮುಖ್ಯ ಮಂತ್ರಿಗಳು ಈ ಸಭೆಯ ನಾಯಕರಾಗಿರುವುದರಿಂದ ಅವರು ಸರಕಾರದ ಅಭಿಪ್ರಾಯವನ್ನು ನಿಷ್ಪಕ್ಷಪಾತವಾಗಿ ತಿಳಿಸಬೇಕು. ಇದನ್ನು ಅವರು ಮರೆಯಬಾರದು. ಇಲ್ಲಿ ಯಾವುದೇ ಒಂದು ಪಕ್ಷವಿಲ್ಲ, ಅನೇಕ ಪಕ್ಷದ ಪ್ರತಿನಿಧಿಗಳಿದ್ದಾರೆ, ಅವರ ಪಕ್ಷದ ಹಿತ ಕಾಯುವುದೊಂದೇ ಅವರ ಕರ್ತವ್ಯವಲ್ಲ, ಇತರ ಪಕ್ಷಗಳವರೂ ಇಲ್ಲಿದ್ದಾರೆ. ಇಲ್ಲಿರುವ ವಿರೋಧ ಪಕ್ಷದವರಮೇಲೂ ಗಂಡಾಂತರ ಬರಬಹುದು, ಬಂದಾಗ ಅವರನ್ನು ರಕ್ಷಿಸಬೇಕಾದ್ದು ಅವರ ಕರ್ತವ್ಯವಾಗಿದೆ. ಇದನ್ನು ಮರೆಯಬಾರದು. ಆದುದರಿಂದ ಅವರು ಈ ಸಭೆಯಲ್ಲಿ ಮಾತನಾಡುವಾಗ ಮೈಸೂರು ರಾಜ್ಯದ ಎರಡು ಕೋಟಿ ಪ್ರಜೆಗಳ ನಾಯಕರು ತಾವು ಎಂಬುದನ್ನರಿತು ಮಾತನಾಡಬೇಕು. ಅವರು ಕಾಂಗ್ರೆಸ್ ಪಕ್ಷ ಮತ್ತು ಇತರ ಪಕ್ಷ ಎಂದು ಭೇದಮಾಡಿ ಮಾತನಾಡಬಾರದು. ಎರಡನೆಯದಾಗಿ ನಾವು ನಮಗೆ ತಿಳಿದಂತೆ ವಿಚಾರಗಳನ್ನು ಇಲ್ಲಿ ತಿಳಿಸುತ್ತೇವೆ. ಅದು ಸರಿಯೇ, ತಪ್ಪೇ ಎಂಬುದನ್ನು ವಿಚಾರಮಾಡಿ ಅವರು ಸರಿಯಾದ ಹೇಳಿಕೆ ಕೊಡಬೇಕು. ನಮಗೆ ಯಾರಾದರು ಬರೆದು ತಿಳಿಸಿರುವುದನ್ನು ಅಥವಾ ಹೇಳಿರುವುದನ್ನು ಇಲ್ಲಿ ಗಮನಕ್ಕೆ ತರುತ್ತೇವೆ. ಅದು ಎಷ್ಟುಮಟ್ಟಿಗೆ ನಿಜ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುವ ಹಕ್ಕು ನಮಗಿದೆ. ಅದಕ್ಕೆ ಚ್ಯುತಿ ಬರಬಾರದು. ನಾವು ಹೇಳುವುದು ನಿಯಮಗಳಿಗನುಗುಣವಾಗಿಲ್ಲವೆಂದು ಅವರು ಹೇಳಬಹುದು. ಇದಕ್ಕೆ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು.

ಕ್ರಿಯಾಲೋಪದಮೇಲೆ ನಾವು ಮಾತನಾಡುವಾಗ ಯಾರಾದರೂ ಅಡ್ಡಿಮಾಡಿದರೆ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಇಲ್ಲದಿದ್ದರೆ ಸಮಂಜಸವಾಗುವುದಿಲ್ಲ. ನಿಯಮಗಳಿಗೆ ಅನುಸಾರವಾಗಿ ಮಾತನಾಡುವವರಿಗೆ ಅಧ್ಯಕ್ಷರು ರಕ್ಷಣೆ ಕೊಡಬೇಕು. ನಿಯಮಗಳನ್ನು ಮೀರಿ ಮಾತನಾಡುವವರು ಸಮರ್ಥನೆಮಾಡುವುದಕ್ಕೆ ಅವಕಾಶ ಕೊಡಬಾರದು.

Mr. SPEAKER.—I have heard the hon. Member. He made certain observations and as far as I can understand, there is no point of order. Everybody should carry on the proceedings in an orderly manner.

3-00 P.M.

†ಶ್ರೀ ಎಚ್. ಸಿದ್ದವೀರಪ್ಪ.—ಸ್ಯಾಮಿ ನನ್ನ ಕ್ರಿಯಾಲೋಪ ಇಷ್ಟೆ. ಮಾನ್ಯ ಮುಖ್ಯ ಮಂತ್ರಿಗಳವರು ಕಾಗ್ರೆಸ್ ಪಾರ್ಟಿಗೆ ಸೇರಿದವರು ಅಂತ ನಮಗೆಲ್ಲಾ ಗೊತ್ತಿದೆ. ಮುಖ್ಯ ಮಂತ್ರಿಗಳಾದ ಮೇಲೆ ಅವರು ಈ ಮೈಸೂರು ದೇಶದ ಎರಡೂವರೆ ಕೋಟಿ ಜನಗಳ ಪ್ರತಿನಿಧಿಗಳೇ ಅಥವಾ ಕಾಗ್ರೆಸ್ ಪಾರ್ಟಿಯ ಪ್ರತಿನಿಧಿಗಳೇ? ಈಗ ಆ ಕಡೆಯ ಮಾನ್ಯ ಸದಸ್ಯರು ಮಾತನಾಡ

(ಶ್ರೀ ಎಚ್. ಸಿದ್ದವೀರಪ್ಪ)

ದ್ದನ್ನು ನೋಡಿದರೆ ಬರೀ ಅವರ ಪಕ್ಷಕ್ಕೇ ಮಂತ್ರಿಗಳು ಅನ್ನುವ ರೀತಿಯಲ್ಲಿ ಮಾತನಾಡಿದರು, ಈ ತಂಕೆ ನನ್ನ ಮನಸ್ಸಿನಲ್ಲಿ ಕೊರೆಯುತ್ತಾ ಇದೆ. ಅವರು ಆ ಪಾರ್ಟಿಯ ಮುಖ್ಯಮಂತ್ರಿಗಳು ಅನ್ನುವುದಾದರೆ ಬಾಕಿ ವಿಚಾರ ಏನೂ ಹೇಳಬೇಕಾದ್ದಿಲ್ಲ, ಮಾತನಾಡಬೇಕಾದ್ದಿಲ್ಲ, ಏನೇನೂ ವಿಷಯ ತಿಳಿಸಬೇಕಾದ್ದಿಲ್ಲ. ಆದ್ದರಿಂದ ತಾವು ಈ ಬಗ್ಗೆ ಮುಖ್ಯಮಂತ್ರಿಗಳಿಂದ ಸಮಜಾಯಿಷಿ ಕೊಡಿಸಬೇಕು ಎಂಬುದೇ ನನ್ನ ಕ್ರಿಯಾರೋಪ.

Mr. SPEAKER.—I shall examine the position.

† ಶ್ರೀ ಎಸ್. ಶಿವಪ್ಪ.—ಬಹಳ ಹಗುರವಾಗಿ ಈ ವಿಚಾರವನ್ನು ಒತ್ತಟ್ಟಿಗಿಟ್ಟು ಹೇಳುವುದಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಾತನಾಡುತ್ತಾ ಈ ಸಭೆಯಲ್ಲಿ ನಡೆಯುತ್ತಾ ಇರತಕ್ಕ ನಡವಳಿಕೆಗಳ ಬಗ್ಗೆ ತಮ್ಮ ಅಸಮಾಧಾನವನ್ನು ತೋರಿಸತಕ್ಕ ರೀತಿಯಲ್ಲಿ, ಒಂದು ಧಾಟಿಯಲ್ಲಿ ಸಭಾಪತಿಯವರಿಗೂ ಕೂಡ ನೇರವಾಗಿ ಸಂಬೋಧನೆ ಮಾಡಿ ಆಮೇಲೆ ತಿದ್ದಿಕೊಂಡರು. ಅವರು ಹೇಳತಕ್ಕ ಧಾಟಿ ಪ್ರಾರಂಭಮಾಡಿದಂತಹ ರೀತಿ ನೋಡಿದಾಗಲೇ ಅಂದುಕೊಂಡೆ ಇವತ್ತು ಮುಖ್ಯಮಂತ್ರಿಗಳು ಬಹಳ ರೀತಿಯಲ್ಲಿ ಮತ್ತು ಕೋಪದ ಉದ್ವೇಗದಲ್ಲಿ ಅನೇಕ ಮಾತುಗಳನ್ನಾಡಿದ್ದಾರೆ ಅವರು ಆ ರೀತಿ ಆಡಬಾರದಾಗಿತ್ತು ಎಂದು. ಇವತ್ತು ಅವರು ವೀರೇಂದ್ರಪಾಟೀಲರವರಾಗಿದ್ದು ನನಗೂ ಅವರಿಗೂ ವೈಯಕ್ತಿಕ ಸಂಬಂಧ ಇದೆ. ಮುಖ್ಯಮಂತ್ರಿಗಳಾಗಿ ವೀರೇಂದ್ರ ಪಾಟೀಲರಿಗೂ ನನಗೂ ಏನೂ ಸಂಬಂಧವಿಲ್ಲ. ಇವತ್ತು ಈ ಸಭೆಯಲ್ಲಿ ಇರುವುದು ಅವರು ದೇಶದ ಮುಖ್ಯ ಮಂತ್ರಿಗಳಾಗಿ ಮತ್ತು ನಾನು ವಿರೋಧ ಪಕ್ಷದ ನಾಯಕನಾಗಿ. ಈ ಸಂಬಂಧದಲ್ಲಿ ಮಾತನಾಡತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳು ನಾನು ಕೇವಲ ಒಬ್ಬ ಪಕ್ಷದ, ಪಕ್ಷಪಾತಿ ಅಂತ ಹೇಳಿದರೆ ನನ್ನ ನಿರೀಕ್ಷೆಯಲ್ಲಿ ಮುಖ್ಯಮಂತ್ರಿಗಳಾಗಿರತಕ್ಕ ವ್ಯಕ್ತಿ ಯಾವ ಒಂದು ಮಟ್ಟದಲ್ಲಿರಬೇಕಾಗಿತ್ತೋ ಆ ಒಂದು ಮಟ್ಟದಿಂದ ಅವರು ಕೆಳಕ್ಕೆ ಬಿದ್ದುಹೋದರು ಎಂದು ಬಹಳ ಅನುಕಂಪದಿಂದ ಹೇಳುತ್ತಾ ಇದ್ದೇನೆ. ಅವರು ಮಾತನಾಡಿದಂತಹ ಧಾಟಿ ಕಾಂಗ್ರೆಸ್ ಪಕ್ಷದವರು, ಕಾಂಗ್ರೆಸ್ ಪಕ್ಷದವನಾಗಿ ಮಾತನಾಡತಕ್ಕವನು ಅಂತ ಹೇಳಿದರೆ ಕೇಳುವುದು ಹೇಗೆ ! The essence of democracy is to agree to differ ; to agree to disagree ನಾನು ಏನೇ ಹೇಳಬಹುದು, ಅವರು ಏನೇ ಹೇಳಬಹುದು, ಇವತ್ತು ಪ್ರಜಾಪ್ರಭುತ್ವದಲ್ಲಿ ಒಂದು ಸಹನೆ, ತಾಳ್ಮೆ ಇಲ್ಲದೆ ಹೋದರೆ ಪ್ರಜಾಪ್ರಭುತ್ವ ಕಪ್ಪಸ್ಕೆ ತುತ್ತಾಗಿದೀತು ಎಂದು ಹೇಳಿ ಅವರು ಹೇಳಿದಂತಹ ಮಾತಿನಿಂದ ನನಗೆ ಅನ್ನಿಸಿತು. ಅವರನ್ನು ಇವತ್ತು ಟೀಕೆ ಮಾಡಬೇಕೆಂಬುದು ನನ್ನ ಉದ್ದೇಶವಲ್ಲ. ಇವತ್ತು ಅವರು ದೇಶದ ಮುಖ್ಯಮಂತ್ರಿಗಳ ಅಂತಸ್ತಿನಲ್ಲಿ ಏರಿದ್ದಾರೆ ಆ ಅಂತಸ್ತಿನಲ್ಲೇ ಅವರು ಇರಬೇಕೆಂಬುದು ನನ್ನ ಆಶೆ. ಅವರಿಗೂ ನನಗೂ ಇರತಕ್ಕ ಸಂಬಂಧವಾದರೂ ಏನು ! ಅವರು ಆದೇ ಪಕ್ಷಕ್ಕೆ ಸೇರಿದ್ದರೂ ಈ ಸಭೆಗೆ ಸಭಾನಾಯಕರು. That is why, he is called the Leader of the House and I am called the Leader of the Opposition. He is the Leader of the House. ಈ ರೀತಿ ಇರುವಾಗ ಕಾಂಗ್ರೆಸ್ ಎಕ್ಸಿಬಿಷನ್‌ನ್ನು ಬಯ್ದರು, ಪಕ್ಷವನ್ನು ಬಯ್ದರು ಅಂತ ಹೇಳಿ ಕೋಪದಲ್ಲಿ ಎದ್ದು ಮಾತನಾಡಿದರೆ ಬಹಳ ಅಹಿತಕರವಾಗುತ್ತದೆ. ಆದ್ದರಿಂದ ತಮ್ಮ ಮುಖೇನ ಅವರಿಗೆ ಹೇಳುವುದೇನೆಂದರೆ ಅವರು ಹೇಳಿದಂತಹ ಕೆಲವು ಮಾತುಗಳನ್ನು ಪುನರುಚ್ಚರಿಸಿ ತಮ್ಮ ಮನಸ್ಸಿನಲ್ಲಿ ಏನಿತ್ತೋ ಅದನ್ನು ಹೇಳಬೇಕು, ಅವರು ಈ ಸಭೆಗೆ ನಾಯಕರು ಮತ್ತು ಈ ದೇಶದ ಮುಖ್ಯಮಂತ್ರಿಯಾಗಿ ಎಲ್ಲರ ಹಿತವನ್ನೂ ಕಾಪಾಡುವುದು ನನ್ನ ಕರ್ತವ್ಯ ಎಂಬುದನ್ನು ಅವರು ಪುಷ್ಟೀಕರಿಸದಿದ್ದರೆ ಈ ಸಭೆಯ ಕಾರ್ಯಕಲಾಪಗಳಿಗೆ ಬಹುಮಟ್ಟಿಗೆ ಅಪಾಯ ಬರುತ್ತದೆ ಎಂಬುದನ್ನು ತಮ್ಮ ಮುಂದೆ ಹೇಳಬೇಕಾಗಿದೆ. ಬಹುಶಃ ಮುಖ್ಯಮಂತ್ರಿಗಳು ಆವರು ಹೇಳಿದನ್ನು ಪುನರುಚ್ಚರಿಸುತ್ತಾರೆ ಎಂದು ಭಾವಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈಗ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಹೇಳಿದರು. ನಾನು ಸಾಮಾನ್ಯವಾಗಿ ಯಾವಾಗಲೂ ಹೇಳಲಿಕ್ಕೆ ಹೋಗುವುದಿಲ್ಲ. ಪ್ರತಿಯೊಬ್ಬರು ನಾವು ಮಾನವರು ಇದ್ದೇವೆ. ಸಹನೆಗೂ ಒಂದು ಮಿತಿ ಇರುತ್ತದೆ. ಈ ಲೆಕ್ಕದಿಂದ ನೋಡಿದಾಗ ನಾವು ಇಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಮ್ಮ ನಮ್ಮ ಪಕ್ಷಗಳ ಲೆಕ್ಕ ಇಟ್ಟುಕೊಂಡು ಮಾತನಾಡಬೇಕಾಗಿಲ್ಲ. ಆದ್ದರಿಂದ ಒಂದು ಪಕ್ಷ ಇನ್ನೊಂದು ಪಕ್ಷಕ್ಕೆ ದೂಷಣೆ ಮಾಡುವುದು ದೂರುವುದು ಇದಕ್ಕೆ ಈ ಒಂದು ಮಾನ್ಯ ಸಭೆಯನ್ನು ಉಪಯೋಗಿಸಿಕೊಳ್ಳಬೇಕಾಗಿಲ್ಲ. ಆ ದೃಷ್ಟಿಯಿಂದ ನಾನು ಅದನ್ನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಈ ಒಂದು ಪರಿಸ್ಥಿತಿ ಏಕೆ ಬರುತ್ತಾ ಇದೆ ಅನ್ನುವಂತಹದನ್ನು ನೋಡಿದರೆ ಇಲ್ಲಿ ಏನಾಗುತ್ತಾ ಇದೆ ಎಂದರೆ, ಏನಾಧರೂ

ಇನ್‌ಫರ್ಮೇಷನ್ ಬೇಕು ಎಂದು ಕೇಳಿದಾಗ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಅವರಿಗೆ ಅನೇಕ ಸಲ ಹೇಳಿದ್ದೇನೆ. ಇವತ್ತು ಮೊದಲನೆಯ ಸಲ ಹೇಳಬೇಕಾಗಿಲ್ಲ, ಪದೇ ಪದೇ ಹೇಳಬೇಕಾಗಿಲ್ಲ. ನಾನು ಪ್ರತಿನಿಧಿಸಿತಕ್ಕದ್ದು ಕೇವಲ ನನ್ನ ಮತಕ್ಷೇತ್ರವೇ ಅಲ್ಲದೆ ಇಡೀ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಮುಖ್ಯಮಂತ್ರಿಯಾಗಿದ್ದೇನೆ, ಇದನ್ನು ಪದೇ ಪದೇ ಹೇಳಬೇಕಾಗಿಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಚಾರ ಅಂತ ಹೇಳುತ್ತಾ ಇದ್ದೇನೆ. ಆದರೆ ಒಂದು ವಿಚಾರ ಬಹಳ ನಮ್ರತೆಯಿಂದ ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಮನೆಯಲ್ಲಿ ಕಾರ್ಯಕಲಾಪಗಳು ನಡೆಯುವ ಕಾಲಕ್ಕೆ ಸಭೆಯಲ್ಲಿ ಕಾಂಗ್ರೆಸನ್ನು ದೂರೀಕರಿಸುವುದಾಗಲೀ, ಪಿ ಎಸ್ ಪಿ ಯನ್ನು ದೂರೀಕರಿಸುವುದಾಗಲೀ, ಕಮ್ಯೂನಿಸ್ಟ್ ಪಾರ್ಟಿಯನ್ನು ದೂರೀಕರಿಸುವುದಾಗಲಿ, ಪಕ್ಷಗಳನ್ನು ದೂಷಣೆ ಮಾಡುವುದಾಗಲಿ ಈ ಕೆಲಸಕ್ಕೆ ಈ ಸಭೆಯನ್ನು ಉಪಯೋಗಿಸಿಕೊಳ್ಳಬಾರದು ಎಂದು ಬಹಳ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ನನಗೆ ದಾವಣಗೆರೆಯಲ್ಲಿ ಏನಾಗಿದೆ ಎಂಬ ಅರಿವು ಸ್ವಲ್ಪಮಟ್ಟಿಗೆ ಇದೆ. ಅದಕ್ಕಾಗಿಯೇ ಹೇಳಿದೆ ಸರ್ಕಾರ ಏನಾದರೂ ಸ್ಟೇಟ್‌ಮೆಂಟ್ ಮಾಡಬೇಕಾದರೆ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ, ಸಾಧ್ಯವಾದಮಟ್ಟಿಗೂ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇವೆ. ಹೊಸ ಇನ್‌ಫರ್ಮೇಷನ್ ಸಂಗ್ರಹ ಮಾಡಲು ಸಾಧ್ಯವಾದರೆ ಅದನ್ನು ಮಾಡಿಕೊಂಡು ನಾಳೆ ಹೇಳಬೇಕಾಗುತ್ತದೆ. ಆದರೆ ಕಾರ್ ಅಚೆನ್‌ಷನ್ ಮೋಷನ್ ಬಂದಮೇಲೆ ಅದರ ಜೊತೆಗೆ ಏನು ನಡೆಯಿತು ಅದು ನನ್ನ ಮನಸ್ಸಿಗೆ ನೋವನ್ನುಂಟು ಮಾಡಿತು. ಏಕೆಂದರೆ ನಾಳೆ ನನ್ನ ಸ್ಟೇಟ್‌ಮೆಂಟ್ ಆಗುವಾಗ ಅಲ್ಲಿ ಏನು ನಡೆಯಿತು ಎಂಬುದು ಮಾನ್ಯ ಸಭೆಗೆ ಗೊತ್ತಾಗುತ್ತದೆ. ಇವತ್ತೂ ಬೇಕಾದರೆ ಹೇಳುವುದಕ್ಕೆ ತಯಾರಾಗಿದ್ದೇನೆ. ಅದರೆ ಅದಕ್ಕೆ ಸ್ವಲ್ಪ ಬ್ಯಾಕ್‌ಗ್ರೌಂಡ್ ತಿಳಿದುಕೊಂಡು ಹೇಳಬೇಕಾಗುತ್ತದೆ ಎಂದು ಯೋಚನೆ ಮಾಡುತ್ತಾ ಇರುವಾಗಲೇ ಒಬ್ಬ ಮಾನ್ಯ ಸದಸ್ಯರು ಎದ್ದು ''ರಕ್ತದ ಕಾಲುವೆ ಹರಿಯಿತು'' ಎಂದು ಹೇಳುವುದಕ್ಕೆ ಶುರು ಮಾಡಿದರೆ ಅದಕ್ಕೆ ಏನಂತ ಉತ್ತರ ಕೊಡಬೇಕು ? ರಕ್ತದ ಕಾಲುವೆ ಹರಿಸೋಣ ಎಂದು ಹೇಳೋಣವೇ ? ಅಥವಾ ಶರಣಾಗತರಾಗಿ ಹಾಗೆ ಮಾಡಬೇಡಿ ಅಂತ ಕೈ ಜೋಡಿಸಿ ಹೇಳಬೇಕೆ ; ಏನೆಂದು ಹೇಳಬೇಕು ಅಂತ ಅರ್ಥವಾಗುವುದಿಲ್ಲ. ಮಾನ್ಯ ಸಭೆಯಲ್ಲಿ ಹೇಳುತ್ತಾ ಇದ್ದೇನೆ ಎನನ್ನು ಹೇಳಬೇಕಾಗಿದ್ದರೂ ಸಹ ಯಾವಾಗಲೂ ಸಿದ್ಧರಾಗಿದ್ದೇವೆ, ತಮಗೆ ಏನು ಇನ್‌ಫರ್ಮೇಷನ್ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಇನ್‌ಫರ್ಮೇಷನ್ ಕೊಟ್ಟಮೇಲೆ ಏನಾದರೂ ಸಂಶಯ ಇದ್ದರೆ ಅಧ್ಯಕ್ಷರು ಇದ್ದಾರೆ ಕೇಳುವುದಕ್ಕೆ ಅನುಮತಿ ಕೊಡುತ್ತಾರೆ, ಪ್ರಶ್ನೋತ್ತರಗಳಾಗುತ್ತದೆ. ಇವುಗಳೆಲ್ಲಾ ನಡೆಯುತ್ತಲೇ ಇರುತ್ತವೆ. ಅದನ್ನು ಬಿಟ್ಟು ಬಹುಶಃ ಬರೆದದ್ದು ಇರಬಹುದು, ಕಾಂಗ್ರೆಸ್ ಗುಂಡಾ ಜನರು ಅಂತ ಮಾನ್ಯ ಸದಸ್ಯರು ಪ್ರಾರಂಭ ಮಾಡಿದರು. 'ಕಾಂಗ್ರೆಸ್ ಗೂಂಡಾ ಜನರನ್ನು ನೀವು ಕರೆದುಕೊಂಡು ಹೋಗಿ ಪ್ರದರ್ಶನ ಮಾಡಿ ಗರಾಜೆ ಮಾಡುತ್ತಾ ಇದ್ದಾರೆ ಎಂದು ಪ್ರಾರಂಭ ಮಾಡಿದರೆ—ವಿರೋಧ ಪಕ್ಷದ ನಾಯಕರಿಗೆ ಕೇಳುತ್ತೇನೆ—ಇವತ್ತು ಈ ಭಾಗದವರು ''ಪಿ ಎಸ್ ಪಿ ಯವರು ಕೆಲವು ಗೂಂಡಾ ಜನರನ್ನು ಕರೆದುಕೊಂಡು ಹೋಗಿ ಪ್ರದರ್ಶನ ಮಾಡಿ ಗರಾಜೆ ಮಾಡುತ್ತಾ ಇದ್ದಾರೆ'' ಎಂದರೆ ಇದು ಎಲ್ಲಿಗೆ ಬರುತ್ತದೆ ! ಆದ್ದರಿಂದ ಸಭೆಯ ಕಾರ್ಯಕರಾಪಗಳನ್ನು ನಡೆಸುವಾಗ ನನ್ನ ಸ್ಟೇಟ್‌ಮೆಂಟ್ ಆದಮೇಲೆ ಆ ಅಭಿಪ್ರಾಯಕ್ಕೆ ಬಂದಿದ್ದಾರೆ ಅಂತ ಅಂದಿದ್ದರೆ ಅದನ್ನು ಒಪ್ಪಿಕೊಳ್ಳಬಹುದಾಗಿತ್ತು, ಸ್ಟೇಟ್‌ಮೆಂಟೇ ನಾನು ಮಾಡಲಿಲ್ಲ, ವಾಸ್ತಾವಾಂಶ ಏನಿದೆ ಎಂಬುದನ್ನು ನಾನಂತೂ ತಿಳಿದುಕೊಳ್ಳಲಿಲ್ಲ, ಇಲ್ಲಿಗೆ ಬಂದಾಗ ಅದು ಗೊತ್ತಾಯಿತು. ಬೆಳಿಗ್ಗೆ ಫೋನ್ ಮಾಡಿರಲಿಲ್ಲ, ಸೆಕ್ರೆಟರಿಯವರಿಗೆ ಫೋನ್ ಮಾಡಿರಬಹುದು. ಸಂಭಂದಪಟ್ಟ ಅಧಿಕಾರಿಗಳು ಯಾರ್ಯಾರ ಹತ್ತಿರ ಮಾತನಾಡಿದ್ದಾರೆ, ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಇವತ್ತಿನದಿವಸ ಹೇಳಬೇಕೆಂಬ ಪರಿಸ್ಥಿತಿಯಲ್ಲದ್ದಾಗ ಕಾಂಗ್ರೆಸ್ ಬಗ್ಗೆ ವಿನಾಕಾರಣ ಆಕ್ಷೇಪಗಳು ಬಂದವು—ಕಾಂಗ್ರೆಸಗೆ ದೂಷಣೆ ಮಾಡುವಂತಹದು, ದೂರುವಂತಹದು ಸರಿಯಾದ್ದಲ್ಲ ಅನ್ನುವುದನ್ನು ಬಹಳ ನಮ್ರತೆಯಿಂದ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ಆ ಕಡೆಯವರು ಕಾಂಗ್ರೆಸ್‌ನವರನ್ನು ಈ ಕಡೆಯವರು ವಿರೋಧ ಪಕ್ಷದವರನ್ನು ಮತ್ತು ಇತರ ಪಕ್ಷದವರನ್ನು ದೂರಬಹುದು. ಆದರೆ ಅದು ಬರೀ ದೂರುವ ಕೆಲಸವಾಗುತ್ತದೆಯೇ ಹೊರತು ನಮ್ಮ ಸಭೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ಆಗುವಂತಹ ಕೆಲಸವಾಗುವುದಿಲ್ಲ. ಆದ್ದರಿಂದ ನಮ್ರತೆಯಿಂದ ವಿನಂತಿ ಮಾಡಿಕೊಂಡಿದ್ದೇನೆ, ಇದಕ್ಕಿಂತ ಹೆಚ್ಚಿಗೆ ನನ್ನ ಮನಸ್ಸಿನಲ್ಲಿ ಇದೆ ಅನ್ನುವಂತಹದು ಯಾವುದೂ ಇಲ್ಲ. ಈ ಸಭೆಯ ಕಾರ್ಯಕರಾಪಗಳು ನಡೆಯಲು ನಾನು ಸ್ಟೇಟ್‌ಮೆಂಟ್ ಮಾಡಲು ನಾಳೆ ತಯಾರಾಗಿದ್ದೇನೆ. ಇವತ್ತೇ ಮಾಡುವುದಕ್ಕೆ ತಯಾರಾಗಿದ್ದೆ, ಇನ್ನೂ ಇನ್‌ಫರ್ಮೇಷನ್ ಬರಬೇಕಾದ್ದರಿಂದ ಮಾಡುವುದಕ್ಕೆ ಆಗಲಲ್ಲ, ಇನ್‌ಫರ್ಮೇಷನ್ ಸಪ್ಲೈಸ್ ಮಾಡಬೇಕೆಂದಾಗಲಿ, ವಿತ್‌ಹೋಲ್ಡ್ ಮಾಡಬೇಕೆಂದಾಗಲಿ ಇಲ್ಲ, ಇನ್‌ಫರ್ಮೇಷನ್ ಕೊಟ್ಟು ಮಾನ್ಯ ಸದಸ್ಯರನ್ನು ಸಮಾಧಾನಗೊಳಿಸುವುದು ನನ್ನ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ.